ಇಂದು ದಿನಾಂಕಃ 25.03.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಿಸಲಾಯಿತು.

**ಪಾಟೀ ಸವಾಲುಃ** ಪ್ರತಿವಾದಿಯರ ಪರ ಶ್ರೀ. ಎಸ್.ಜಿ.ಪಿ. ವಕೀಲರಿಂದಃ

1. ನನ್ನ ತಂದೆಯ ಹೆಸರು ಗುರುರಾಜಗೌಡ ಎಂದರೆ ಸರಿ. ನಾನು ದಿನಾಂಕಃ 15.08.1992 ರಂದು ಜನಿಸಿರುತ್ತೇನೆ. ನನ್ನ ತಾಯಿ ನಾನು ಹುಟ್ಟಿನ ದಿನವೇ ತೀರಿಕೊಂಡಿರುತ್ತಾರೆ. ನಾನು ಒಬ್ಬಳೇ ಮಗಳು. ನನ್ನ ತಾಯಿ ತೀರಿಕೊಂಡ ನಂತರ ನನ್ನ ತಂದೆ ಪ್ರತಿವಾದಿ 3 ರವರನ್ನು ಮದುವೆಯಾಗಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಪ್ರತಿವಾದಿ 3 ರವರಿಗೆ ಪ್ರತಿವಾದಿ 2, 4 ಹಾಗೂ 5 ರವರು ಮಕ್ಕಳಿರುತ್ತಾರೆ ಎಂದರೆ ಸಾಕ್ಷಿಯು ಅವರಿಗೂ ನಮಗೂ ಯಾವುದೇ ಸಂಬಂಧ ಇಲ್ಲ ಎಂದು ನುಡಿಯುತ್ತಾರೆ.

2. ಪ್ರತಿವಾದಿ 2 ರಿಂದ 5 ರವರಿಗೂ ಹಾಗೂ ನನಗೂ ಸಂಬಂಧ ಇದ್ದರೂ ಸಹಜ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳು ಪಿತ್ರಾರ್ಜಿತ ಆಸ್ತಿಗಳು ಎಂದರೆ ಸರಿ. ನನ್ನನ್ನು ನನ್ನ ತಂದೆಯ ಅಣ್ಣ ಸಾಕಿ ಸಲುಹಿರುತ್ತಾರೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ನನ್ನ ತಂದೆ ಇಟ್ಟುಕೊಳ್ಳಲ್ಲ ಎಂದ ಕಾರಣ ನನ್ನ ದೊಡ್ಡಪ್ಪ ಸಾಕಿರುತ್ತಾರೆ ಎಂದು ನುಡಿಯುತ್ತಾರೆ. ನಾನು ಹುಟ್ಟಿದಾಗಿನಿಂದ ನನ್ನ ತಂದೆ ನನ್ನನ್ನು ನೋಡಿಕೊಂಡಿಲ್ಲ. ನನ್ನ ದೊಡ್ಡಪ್ಪನಿಗೂ ಸಹ ಒಬ್ಬ ಮಗಳಿದ್ದು, ಅವಳ ಹೆಸರು ನಾಗರತ್ನ. ಸಾಕ್ಷಿಯು ಮುಂದುವರೆದು ಒಬ್ಬ ಮಗನೂ ಸಹ ಇದ್ದಾನೆ ಎಂದು ನುಡಿಯುತ್ತಾರೆ. ನನ್ನನ್ನು ತುಮ್ಮಿನಕಟ್ಟಿ ಊರಿನ ಕೊಟ್ಟಿರುತ್ತಾರೆ.

3. ಮದುವೆ ಕಾಲಕ್ಕೆ ನನ್ನ ತಂದೆಯೇ ಲ್ಲಾ ಖರ್ಚು ಮಾಡಿರುತ್ತಾರೆ ಎಂದರೆ ಸರಿಯಲ್ಲ. ನನಗೆ ದಾವಾ ಆಸ್ತಿಯ ಹಿಸ್ಸೆ ಬದಲಾಗಿ ಒಡವೆ, ಹಣ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿ 1 ರವರೇ ನಿಂತು ನನ್ನ ಮದುವೆ ಮಾಡಿದ್ದರೂ ಸಹ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿ 1 ಪ್ರತಿವಾದಿ 3 ರವರನ್ನು ಮದುವೆಯಾಗಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ತಂದೆ ಪ್ರತಿವಾದಿ 3 ರವರನ್ನು ಮದುವೆಯಾದ ನಂತರ ನನ್ನ ದೊಡ್ಡಪ್ಪ ನನ್ನನ್ನು ಕರೆದುಕೊಂಡು ಹೋಗಿರುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿ 1 ರವರು ಅವರ ಜೀವಿತ ಕಾಲದಲ್ಲೇ ದಾವಾ ಆಸ್ತಿಗಳನ್ನು ಪ್ರತಿವಾದಿ 2 ರವರಿಗೆ ಕೊಟ್ಟಿದ್ದು ಆ ಪ್ರಕಾರ ದಾಖಲೆಗಳಿರುತ್ತವೆ ಎಂದರೆ ಸುಳ್ಳು. ಪ್ರತಿವಾದಿ 2 ರಿಂದ 5 ರವರು ಯಾರು ಎಂಬುದರ ಬಗ್ಗೆ ನನ್ನ ವಾದ ಪತ್ರದಲ್ಲಿ ಹೇಳಿ ಬರೆಸಿರುವುದಿಲ್ಲ.

4. ಪ್ರತಿವಾದಿ 4 ಹಾಗೂ 5 ರವರು ಈಗಾಗಲೇ ಮದುವೆ ಆಗಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಆಸ್ತಿಗಳಲ್ಲಿ ನನಗೆ ಯಾವುದೇ ಹಕ್ಕಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿ 2, 4 ಮತ್ತು 5 ರವರು ಸಹ ಪ್ರತಿವಾದಿ 1 ರವರ ವಾರಸುದಾರರು ಎಂದರೆ ಸುಳ್ಳು.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ನನ್ನ ಸಮಕ್ಷಮ
Sd/-

ಓ ಹೇ ಕೇ ಸರಿ ಇದೆ.

ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ., ಸಂಚಾರಿ
ನ್ಯಾಯಪೀಠ ರಟ್ಟೀಹಳ್ಳಿ .